# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

## ಜೂನ್ ೦೬, ೨೦೧೯ರ ಗುರುವಾರದಂದು ನಡೆದ ಕಾರ್ಯಕಾರಿ ಸಮಿತಿ ೨೦೦ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು, ಕವಿಹಂ. | : ಅಧ್ಯಕ್ಷರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು. | : ಸದಸ್ಯರು |
| ೦೩. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು. | : ಸದಸ್ಯರು |
| ೦೪. ಡಾ. ವೀರೇಶ ಬಡಿಗೇರ, ಡೀನ್, ಭಾಷಾ ನಿಕಾಯ, ಕವಿಹಂ. | : ಸದಸ್ಯರು |
| ೦೫. ಡಾ. ಕೇಶವನ್ ಪ್ರಸಾದ್, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ. | : ಸದಸ್ಯರು |
| ೦೬. ಡಾ. ಕೆ.ರವೀಂದ್ರನಾಥ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ. | : ಸದಸ್ಯರು |
| ೦೭. ಡಾ. ಸಿ.ಮಹದೇವ, ಡೀನ್, ವಿಜ್ಞಾನಗಳ ನಿಕಾಯ, ಕವಿಹಂ. | : ಸದಸ್ಯರು |
| ೦೮. ಡಾ. ಸಿದ್ಧಗಂಗಮ್ಮ, ಹಣಕಾಸು ಅಧಿಕಾರಿಗಳು, ಕವಿಹಂ. | : ವಿಶೇಷ ಆಹ್ವಾನಿತರು |
| ೦೯. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ. | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೨೯.೦೧.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೯ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು (ಅನುಬಂಧ-೦೧).

**ನಿರ್ಣಯ** : ದಿನಾಂಕ ೨೯.೦೧.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೯ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಸಭೆ ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೨೯.೦೧.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೯ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು (ಅನುಬಂಧ-೦೨).

**ನಿರ್ಣಯ** : ದಿನಾಂಕ ೨೯.೦೧.೨೦೧೯ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೯ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಸಭೆ ಅನುಮೋದನೆ ನೀಡಿತು.

**೨೦೦. ೦೧** ಭದ್ರತಾ ಸಿಬ್ಬಂದಿಯ ಟೆಂಡರ್ ಪ್ರಕ್ರಿಯೆಗೆ ಕಾರ್ಯಕಾರಿ ಸಮಿತಿ ಸಭೆ ಘಟನೋತ್ತರ ಅನುಮೋದನೆ ಕೋರಿದೆ.

**ನಿರ್ಣಯ** : ಭದ್ರತಾ ಸಿಬ್ಬಂದಿ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳುವ ಅಗತ್ಯವಿದ್ದಲ್ಲಿ, ಈ ಸಂಬಂಧ ಹುದ್ದೆಗಳನ್ನು ಸೃಜಿಸಿಕೊಂಡು, C & R ನಲ್ಲಿ ಅಳವಡಿಸಿಕೊಂಡು ಕ್ರಮವಹಿಸಲು ಸಭೆ ತೀರ್ಮಾನಿಸಿತು. ಹಾಗೂ ಪ್ರಸ್ತುತ ಟೆಂಡರ್ ಪ್ರಕ್ರಿಯೆಗೆ ಸಭೆ ಘಟನೋತ್ತರ ಅನುಮೋದನೆ ನೀಡಿತು.

**೨೦೦. ೦೨** ಶುಚಿತ್ವ ಕೆಲಸಗಾರರ ಟೆಂಡರ್ ಪ್ರಕ್ರಿಯೆಗೆ ಕಾರ್ಯಕಾರಿ ಸಮಿತಿ ಸಭೆ ಘಟನೋತ್ತರ ಅನುಮೋದನೆ ಕೋರಿದೆ.

**ನಿರ್ಣಯ** : ಶುಚಿತ್ವ ಕೆಲಸಗಾರರ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳುವ ಅಗತ್ಯವಿದ್ದಲ್ಲಿ, ಈ ಸಂಬಂಧ ಹುದ್ದೆಗಳನ್ನು ಸೃಜಿಸಿಕೊಂಡು, C & R ನಲ್ಲಿ ಅಳವಡಿಸಿಕೊಂಡು ಕ್ರಮವಹಿಸಲು ಸಭೆ ತೀರ್ಮಾನಿಸಿತು. ಹಾಗೂ ಪ್ರಸ್ತುತ ಟೆಂಡರ್ ಪ್ರಕ್ರಿಯೆಗೆ ಸಭೆ ಘಟನೋತ್ತರ ಅನುಮೋದನೆ ನೀಡಿತು.

**೨೦೦. ೦೩** ಡಾ. ಜನಾರ್ದನ, ಸಹಾಯಕ ಪ್ರಾಧ್ಯಾಪಕ ಅವರು ದಿನಾಂಕ ೨೧.೦೩.೨೦೧೯ರ ಪತ್ರದ ಮೂಲಕ ಮುಂಬಡ್ತಿ ಸಂದರ್ಭದಲ್ಲಿ ಫೆಬ್ರವರಿ ೨೦೧೭ರಿಂದ ಅನ್ವಯವಾಗುವಂತೆ ಯುಜಿಸಿ ಆದೇಶವನ್ನು ಪರಿಗಣಿಸಲು ಕೋರಿ ಸಲ್ಲಿಸಿರುವ ಮನವಿ ಕುರಿತು.

**ನಿರ್ಣಯ** : ಯು.ಜಿ.ಸಿ / ಸರ್ಕಾರದ ನಿಯಮಾನುಸಾರ ಕ್ರಮವಹಿಸಲು ಸಭೆ ಅನುಮೋದನೆ ನೀಡಿತು.

೨೦೦. ೦೪ ಡಾ. ಎಂ.ಸಿ. ಗುಡಿಮನಿ, ಗ್ರಂಥಾಲಯ ತಾಂತ್ರಿಕ ಸಹಾಯಕ ಇವರು ದಿನಾಂಕ ೧೫.೦೪.೨೦೧೯ರ ಪತ್ರದ ಮೂಲಕ ಉಚ್ಚ ನ್ಯಾಯಾಲಯ ಧಾರವಾಡ ಸಂಚಾರಿ ಪೀಠದ ತೀರ್ಪಿನ ಆದೇಶವನ್ನು ಅನುಷ್ಠಾನಗೊಳಿಸಲು ಮನವಿ ಸಲ್ಲಿಸಿರುವ ಕುರಿತು.

ನಿರ್ಣಯ : ಅಧೀನ ಶಾಸನ ರಚನಾ ಸಮಿತಿಯ ಶಿಫಾರಸ್ಸಿನಂತೆ ನ್ಯಾಯಾಲಯದ ತೀರ್ಪು ಸರ್ಕಾರದ ಯಾವುದೇ ನಿಯಮಗಳ ಪ್ರಕಾರ ಇಲ್ಲದೇ ಇದ್ದ ಪಕ್ಷದಲ್ಲಿ ಅಂತಹ ತೀರ್ಪಿನ ವಿರುದ್ದ ಸಕಾಲದಲ್ಲಿ ಮೇಲ್ಮನವಿಯನ್ನು ಸಲ್ಲಿಸಲು ಕ್ರಮಕೈಗೊಳ್ಳತಕ್ಕದ್ದು ಎಂಬ ಸಂಖ್ಯೆ:ಸಿಆಸುಇ ೨೫ ಸೇಇವಿ ೨೦೦೨, ದಿನಾಂಕ ೧೯.೧೦.೨೦೦೨ರ ಸರ್ಕಾರದ ಆದೇಶದನ್ವಯ ಮೇಲ್ಮನವಿ ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

೨೦೦. ೦೫ ಅಣ್ಣಾ ಫೌಂಡೇಶನ್‌ನ ಶ್ರೀ ರಾಜಶೇಖರ ಮುಲಾಲಿ ಇವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ದೂರಿನ ಸಂಬಂಧ ಡಾ. ಮಲ್ಲಿಕಾ ಎಸ್.ಘಂಟಿ, ವಿಶ್ರಾಂತ ಕುಲಪತಿಗಳು ದಿನಾಂಕ ೦೬.೦೫.೨೦೧೯ರಂದು ಸಲ್ಲಿಸಿರುವ ಮನವಿ ಪತ್ರ ಕುರಿತು.

ನಿರ್ಣಯ : ಈ ಸಂಬಂಧ ಆಂತರಿಕ ತಜ್ಞರನ್ನು ನಿಯೋಜಿಸುವುದು; ಆ ತಜ್ಞರು ನಿಕಟಪೂರ್ವ ಕುಲಪತಿಯವರ ಅವಧಿಯಲ್ಲಿ ಖರೀದಿಸಲಾದ ಉಪಕರಣ ಮತ್ತು ಸಾಮಗ್ರಿಗಳ ಬಿಲ್ಲುಗಳನ್ನು ಮತ್ತು ಸ್ಟಾಕ್‌ರಿಜಿಸ್ಟರ್ ವಿವರಗಳನ್ನು ಪರಿಶೀಲಿಸಿ ಸಮಗ್ರ ವರದಿಯನ್ನು ಸಲಿಸುವಂತೆ ಕ್ರಮವಹಿಸಬೇಕೆಂದು ಸಭೆ ತೀರ್ಮಾನಿಸಿತು.

೨೦೦. ೦೬ ಕನ್ನಡ ವಿಶ್ವವಿದ್ಯಾಲಯದ ನಿಕಟಪೂರ್ವ ಕುಲಪತಿಯವರಾದ ಪ್ರೊ. ಮಲ್ಲಿಕಾ ಎಸ್.ಘಂಟಿಯವರು ಬರೆದಿರುವ ಪತ್ರಕ್ಕೆ ಸಂಬಂಧಿಸಿದಂತೆ ಲಲಿತಕಲೆಗಳ ನಿಕಾಯದ ಡೀನರಾದ ಡಾ. ಡಿ.ಪಾಂಡುರಂಗ ಬಾಬು ಅವರು ಬರೆದಿರುವ ಪತ್ರದ ಕುರಿತು.

ನಿರ್ಣಯ : ಅ. ಸೋಮನಾಥ ಎಚ್.ಎಂ. ಅವರ ಅಮಾನತ್ತು ಕುರಿತಂತೆ ಅಮಾನತ್ತು ಅವಧಿಯನ್ನು ಸಕಾರಣಗಳಿಲ್ಲದೆ ಅನಿರ್ದಿಷ್ಟಾವಧಿ ವಿಸ್ತರಿಸಿರುವುದಕ್ಕೆ ಮತ್ತು ದಿ.೧೧.೦೯.೨೦೦೩ರ ಸರ್ಕಾರದ ಆದೇಶದನ್ವಯ ಗರಿಷ್ಠ ಕಾಲಮಿತಿಯೊಳಗೆ ವಿಚಾರಣೆ ಪೂರ್ಣಗೊಳಿಸದಿರುವುದಕ್ಕೆ ಕಾಯ್ದೆಬದ್ಧ ಕಾರಣಗಳನ್ನು ಸಂಬಂಧಪಟ್ಟ ನಿಕಟಪೂರ್ವ ಕುಲಸಚಿವರುಗಳಿಂದ ಪಡೆದು ಮುಂದಿನ ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸುವುದು.

ಆ. ಶ್ರೀ ಸೋಮನಾಥ. ಎಚ್.ಎಂ. ಅಧೀಕ್ಷಕರು ಇವರನ್ನು ಅಮಾನತ್ತುಗೊಳಿಸಿದ ಮತ್ತು ಇವರ ವಿರುದ್ಧದ ಆರೋಪಗಳ ಮೇಲೆ ವಿಚಾರಣೆ ನಡೆಸಿದ ಎರಡು ಪ್ರತ್ಯೇಕ ಪ್ರಕರಣಗಳನ್ನು ಕಾರ್ಯಕಾರಿ ಸಮಿತಿಯು ಅವಲೋಕಿಸಿತು. ಶ್ರೀ ಸೋಮನಾಥ.ಎಚ್.ಎಂ, ಅಧೀಕ್ಷಕರು ಇವರನ್ನು ಕಮಲಾಪುರ ಠಾಣೆ ಗುನ್ನೆ ನಂ.೪೧/೨೦೧೭ರ ಪ್ರಕರಣದಲ್ಲಿ ವಿಚಾರಣೆಗೆ ಕಾಯ್ದಿರಿಸಿ, ದಿನಾಂಕ ೧೬.೦೫.೨೦೧೭ರಿಂದ ಅಮಾನತ್ತಿನಲ್ಲಿ ಇರಿಸಲಾಗಿತ್ತು. ಸದರಿ ಪ್ರಕರಣದ ಮುಂದಿನ ತನಿಖೆ/ ವಿಚಾರಣೆಗೆ ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠವು ದಿನಾಂಕ ೧೧.೦೮.೨೦೧೭ರಂದು ತಡೆಯಾಜ್ಞೆ ನೀಡಿದೆ. ಶ್ರೀಯುತರು ಮಾನ್ಯ ನ್ಯಾಯಾಲಯದ ಆದೇಶದ ಅನುಸಾರ ಕ್ರಮಕ್ಕಾಗಿ ವಿಶ್ವವಿದ್ಯಾಲಯವನ್ನು ದಿನಾಂಕ ೧೪.೦೮.೨೦೧೭ರಂದು ಕೋರಿದ್ದರು. ಅಮಾನತ್ತಿನ ಅವಧಿಯಲ್ಲಿ ನೌಕರನ ವಿರುದ್ಧ ಮಾಡಿದ ಆರೋಪಗಳ ಬಗ್ಗೆ ಯಾವ ರೀತಿಯ ತನಿಖೆಯನ್ನು ಮಾಡದೇ ಇದ್ದ ಪಕ್ಷದಲ್ಲಿ, ನೌಕರನನ್ನು ಪುನಃ ಕೆಲಸಕ್ಕೆ ನೇಮಿಸಿಕೊಳ್ಳಬೇಕಾಗುತ್ತದೆ ಎಂದು ಸಂ. ಡಿಪಿಎಆರ್ ೧೩ ಎಸ್‌ಡಿಇ ೮೫ ದಿ. ೦೩.೦೭.೧೯೮೫ ರಲ್ಲಿ ಸರ್ಕಾರವು ಆದೇಶಿಸಿದೆ. ಓಪಿ ಗುಪ್ತಾ ವಿರುದ್ಧ ಭಾರತ ಸರಕಾರ ೧೯೮೭ ಎಸ್‌ಸಿ ೨೨೫೭ ಮತ್ತು ೧೯೮೭/೪ ಎಸ್‌ಸಿಸಿ ೩೨೮ ಇವೆರಡು ಪ್ರಕರಣಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಮಾನತ್ತನ್ನು ಮುಂದುವರೆಸುವ ಅವಶ್ಯಕತೆ ಬಗ್ಗೆ ನಿಯತಕಾಲಿಕವಾಗಿ ವಿಮರ್ಶಿಸಿ, ದೀರ್ಘಾವಧಿಯ ಅಮಾನತ್ತನ್ನು ತಪ್ಪಿಸಬೇಕೆಂದು ಮತ್ತು ಒಬ್ಬ ನೌಕರನ ಅಮಾನತ್ತನ್ನು ಅನಿರ್ದಿಷ್ಟ ಕಾಲದವರೆಗೆ ಮುಂದುವರೆಸುವುದು ಅಮಾನತ್ತುಗೊಳಿಸುವ ಅಧಿಕಾರದ ದುರುಪಯೋಗವಾಗುತ್ತದೆ ಎಂದು ತೀರ್ಪು ನೀಡಿದೆ. ಶ್ರೀಯುತರನ್ನು ವಿಚಾರಣೆಗೆ ಒಳಪಡಿಸಿದ ಪ್ರಕರಣದಲ್ಲಿ, ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸಿರುವ ಅಧಿಕಾರಿಗಳನ್ನು ಕರ್ತವ್ಯಲೋಪದ ಆರೋಪದ ಮೇಲೆ ಶಿಸ್ತಿನ ಕ್ರಮಕ್ಕೆ ಗುರಿಪಡಿಸಬೇಕಾಗುತ್ತದೆ ಎಂಬ ಸಂ. ಸಿಆಸುಇ ೦೪ ಸೇಇವಿ ೮೫ ದಿ.೧೧.೦೯.೨೦೦೩ರ ಸರ್ಕಾರದ ಆದೇಶದಲ್ಲಿನ ಗರಿಷ್ಠ ಕಾಲಮಿತಿಯೊಳಗೆ ಇಲಾಖಾ ವಿಚಾರಣೆಯನ್ನು ಪೂರ್ಣಗೊಳಿಸಿಲ್ಲ. ಆದ್ದರಿಂದ ಸರಕಾರದ ಆದೇಶಗಳು ಮತ್ತು ಮಾನ್ಯ ನ್ಯಾಯಾಲಯದ ಉಕ್ತಿಗಳನ್ನು ಪಾಲನೆ ಮಾಡದೇ ಎರಡು ವರ್ಷಗಳ ಅನಿರ್ದಿಷ್ಟ ಕಾಲ ಸಕಾರಣಗಳಿಲ್ಲದೆ ಅಮಾನತ್ತು ಅವಧಿಯನ್ನು ವಿಸ್ತರಿಸಿ, ನೌಕರನಿಂದ ಯಾವುದೇ ಕೆಲಸವನ್ನು ತೆಗೆದುಕೊಳ್ಳದೆ ಆತನಿಗೆ ವೇತನ ಪಾವತಿಸಿ ಸರಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡಿರುವುದರಿಂದ ಸರಕಾರದ ಆದೇಶಗಳನ್ನು ಪಾಲಿಸದಿರುವುದಕ್ಕೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸಲು, ಸಂಬಂಧಪಟ್ಟವರಿಗೆ ನೋಟಿಸ್ ಜಾರಿ ಮಾಡಿ, ಅವರಿಂದ ಸಮಂಜಸ ವಿವರಣೆಗಳನ್ನು ಪಡೆದು, ಮುಂದಿನ ಸಭೆಯಲ್ಲಿ ಮಂಡಿಸುವಂತೆ ಸರ್ಕಾರದ ಉನ್ನತ ಶಿಕ್ಷಣ

ಇಲಾಖೆ ಉಪಕಾರ್ಯದರ್ಶಿ ಅವರು ಮಂಡಿಸಿದ ಅಭಿಪ್ರಾಯದಂತೆ ನಿಯಮಾನುಸಾರ ಕ್ರಮ ಜರುಗಿಸಲು ಕಾರ್ಯಕಾರಿ ಸಮಿತಿಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು. ಮಾನ್ಯ ನ್ಯಾಯಾಲಯದ ತಡೆಯಾಜ್ಞೆಯ ಮಧ್ಯೆಯೂ ಎರಡು ವರ್ಷಗಳಿಂದ ಅನಿರ್ದಿಷ್ಟ ಕಾಲ ಶ್ರೀಯುತರನ್ನು ಅಮಾನತ್ತಿನಲ್ಲಿ ಮುಂದುವರೆಸಿದ ಕ್ರಮದಲ್ಲಿ, ನೈಸರ್ಗಿಕ ನ್ಯಾಯತತ್ವ ಪಾಲನೆಯಾಗದಿರುವ ಮತ್ತು ಅಮಾನತ್ತು ಪ್ರಕರಣದಲ್ಲಿ ನೌಕರನ ವಿರುದ್ಧದ ಆರೋಪಗಳು ಸಾಬೀತಾಗಿಲ್ಲದಿರುವ ಅಂಶಗಳನ್ನು ಅವಲೋಕಿಸಿದ ಕಾರ್‍ಯಕಾರಿ ಸಮಿತಿಯು ಅಮಾನತ್ತು ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸಿ, ಅಮಾನತ್ತು ಆಜ್ಞೆಯನ್ನು ಹಿಂತೆಗೆದುಕೊಳ್ಳಲು ಸರ್ವಾನುಮತದಿಂದ ನಿರ್ಣಯಿಸಿತು. ಶ್ರೀಯುತರ ಮೇಲಿನ ಆರೋಪಗಳ ಮೇಲೆ ವಿಚಾರಣೆ ನಡೆಸಿರುವ ಮತ್ತೊಂದು ಪ್ರಕರಣದಲ್ಲಿ, ಕೆಲವು ಆರೋಪಗಳು ರುಜುವಾತಾಗಿಲ್ಲ ಮತ್ತು ಕೆಲವು ಆರೋಪಗಳು ರುಜುವಾತಾಗಿವೆ ಎಂದು ದಿನಾಂಕ ೨೩.೦೨.೨೦೧೯ರಂದು ವಿಚಾರಣಾಧಿಕಾರಿಯವರು ವಿಶ್ವವಿದ್ಯಾಲಯಕ್ಕೆ ವರದಿಯನ್ನು ಸಲ್ಲಿಸಿದ್ದಾರೆ. ಎಸ್.ಪಾರ್ಥಸಾರಥಿ ವಿರುದ್ಧ ಎ.ಪಿ. ಸರಕಾರ ಎಐಆರ್ ೧೯೭೩ ಎಸ್‌ಸಿ ೨೭೦೧ ಮತ್ತು ಎಲ್. ಎಸ್. ಶೇಷಾದ್ರಿ ವಿರುದ್ಧ ಜಿಟಿಟಿಐ ಐಎಲ್‌ಆರ್ ೧೯೯೯-೧೩ ಎಟಿಸಿ ೧೩೬-ಜೋಧ್‌ಪುರ್ ಪ್ರಕರಣಗಳಲ್ಲಿ ಭಾಗಶಃ ರುಜುವಾತಾಗಿದೆ ಎಂದಾಗ ಅದು ಪೂರ್ಣ ರುಜುವಾತಾಗಿಲ್ಲವೆಂದು ತೀರ್ಮಾನಿಸತಕ್ಕದ್ದು ಹಾಗೂ ಅಂತಹ ಭಾಗಶಃ ರುಜುವಾತಾಗಿದೆ ಎಂಬ ವರದಿಯನ್ನು ಆಧರಿಸಿ ನೌಕರನನ್ನು ದಂಡಿಸತಕ್ಕದ್ದಲ್ಲ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿದೆ. ಮುಂದುವರೆದು, ಮಾನ್ಯ ಸರ್ವೋಚ್ಚ ಮತ್ತು ರಾಜ್ಯ ಉಚ್ಚ ನ್ಯಾಯಾಲಯಗಳು ಕೆಳಕಂಡ ಪ್ರಕರಣಗಳಲ್ಲಿ, Undue delay in holding enquiries : -

The Apex court of the country – Hon'ble Supreme Court has observed in Madhya Pradesh Vs. Bani Singh (AIR 1990 SC 1308) that "unexpected delay in issuing chargesheet (for 12 years) cannot be condoned and the department cannot be permitted to proceed with departmental inquiry".

Hon'ble High Court of Karnataka also has observed on these lines in KSRTC Vs. Hanumanthappa (ILR 1995 KAR 166) (12 years) + N. Krishnamurthy Vs. Syndicate Bank (ILR 1999 KAR 3696) + N.B.Kulkarni Vs. LIC (ILR 1999 KAR 2677) (5 Years) + Nanda Gopal Vs. Selvidas 1995 KAR 163 (20 Years).

ಎಂದು ತೀರ್ಪು ನೀಡಿವೆ. ವಿಚಾರಣಾ ವರದಿಯನ್ನು ಶಿಸ್ತು ಪ್ರಾಧಿಕಾರವು ಒಪ್ಪಲೇಬೇಕೆಂಬ ನಿರ್ಬಂಧಗಳಿಲ್ಲ. ಭಾಗಶಃ ರುಜುವಾತಾಗಿಲ್ಲದ ಆರೋಪಗಳ ಮೇಲೆ ನೌಕರನನ್ನು ದಂಡಿಸತಕ್ಕದ್ದಲ್ಲ ಮತ್ತು ೨೦೧೦ರ ಅವಧಿಯ ದಾಖಲೆಗಳನ್ನು ಆಧರಿಸಿ ೮ ವರ್ಷಗಳ ನಂತರ ವಿಚಾರಣೆಗೆ ಒಳಪಡಿಸಿದ ಕ್ರಮದಲ್ಲಿ, ನೈಸರ್ಗಿಕ ನ್ಯಾಯತತ್ವ ಪಾಲನೆಯಾಗಿಲ್ಲದಿರುವುದನ್ನು ಅವಲೋಕಿಸಿದ ಕಾರ್ಯಕಾರಿ ಸಮಿತಿಯು, ಮೇಲ್ಕಂಡ ಮಾನ್ಯ ನ್ಯಾಯಾಲಯಗಳ ಉಕ್ತಿಗಳನ್ವಯ ಸದರಿ ವಿಚಾರಣಾ ವರದಿಯನ್ನು ಒಪ್ಪುವುದು ನ್ಯಾಯಸಮ್ಮತವಲ್ಲವೆಂದು ನಿರಾಕರಿಸಿ, ನೌಕರನನ್ನು ಆರೋಪಮುಕ್ತಗೊಳಿಸಲು ಸರ್ವಾನುಮತದಿಂದ ನಿರ್ಣಯಿಸಿತು.

ಇ. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮತ್ತು ಕಾನೂನು ತಜ್ಞರ ಅಭಿಪ್ರಾಯದಂತೆ ನಿಯಮಾನುಸಾರ ಕೂಡಲೇ ಜಾರಿಗೆ ಬರುವಂತೆ ಅಮಾನತ್ತು ಆಜ್ಞೆಯನ್ನು ಹಿಂಪಡೆಯಲು ಸರ್ವಾನುಮತದಿಂದ ತೀರ್ಮಾನಿಸಿತು.

೨೦೦. ೦೭ ಮಾನ್ಯ ಕುಲಪತಿಗಳ ಅನುಮೋದನೆ ಹಿನ್ನೆಲೆಯಲ್ಲಿ ಪುನರ್ ರಚಿಸಲಾದ ಪ್ರಸಾರಾಂಗದ ಸಲಹಾ ಸಮಿತಿಗೆ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ನೀಡುವ ಕುರಿತು.

ನಿರ್ಣಯ : ಈ ಕುರಿತು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೦. ೦೮ ದಿನಾಂಕ ೦೫.೦೪.೨೦೧೯ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೦. ೦೯ ಡಾ. ಮೋಹನ್‌ಕೃಷ್ಣ ರೈ, ಪ್ರಾಧ್ಯಾಪಕರು, ಚರಿತ್ರೆ ವಿಭಾಗ ಇವರ ಸೆಬಾಟಿಕಲ್ ರಜೆ ಕೋರಿಕೆ ಮನವಿ ಕುರಿತು.

ನಿರ್ಣಯ : ನಿಯಮಾನುಸಾರ ಸೆಬಾಟಿಕಲ್ ರಜೆ ಮಂಜೂರು ಮಾಡಲು ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

೨೦೦. ೧೦ ಮಾನ್ಯ ಕುಲಪತಿಯವರ ಆದೇಶ ಸಂಖ್ಯೆ ಕವಿಹಂ/ಕುಪ/ಕುಸನೇ/೨೦೧೯-೨೦/೯೨ ಮೇ, ೧೭ ೨೦೧೯ರನ್ವಯ ಡಾ. ಎ. ಸುಬ್ಬಣ್ಣ ರೈ, ಪ್ರಾಧ್ಯಾಪಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ ಇವರನ್ನು ಕಾರ್‍ಯಕಾರಿ ಸಮಿತಿ ಅನುಮೋದನೆ

ನಿರೀಕ್ಷಿಸಿ ಕುಲಸಚಿವರನ್ನಾಗಿ ನಿಯೋಜಿಸಿರುವ ಕ್ರಮಕ್ಕೆ ಕಾರ್ಯಕಾರಿ ಸಮಿತಿಯ ಘಟನೋತ್ತರ ಅನುಮೋದನೆ ನೀಡುವ ಕುರಿತು.

ನಿರ್ಣಯ : ಡಾ. ಎ. ಸುಬ್ಬಣ್ಣ ರೈ, ಪ್ರಾಧ್ಯಾಪಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ ಇವರನ್ನು ಕುಲಸಚಿವರನ್ನಾಗಿ ನಿಯೋಜಿಸಿರುವ ಕ್ರಮಕ್ಕೆ ಸಭೆ ಅನುಮೋದನೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೨೦೦. ೧೧ ದೂರಶಿಕ್ಷಣ ನಿರ್ದೇಶನಾಲಯದ ೨೦೧೯–೨೦ನೇ ಸಾಲಿನ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಕುರಿತು ಅಧಿಸೂಚನೆ ಹೊರಡಿಸುವ ಬಗ್ಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ದೂರಶಿಕ್ಷಣ ನಿರ್ದೇಶನಾಲಯದ ೯ ಅಧ್ಯಯನ ಕೇಂದ್ರಗಳಿಗೆ ಮಾನ್ಯತೆ ಮುಂದುವರೆಸಲು, ಪ್ರವೇಶಾತಿ ಪಡೆಯಲು ಹಾಗೂ ನಿಗದಿತ ಶುಲ್ಕದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯಗಳನ್ನು ಸಭೆಯು ಪರಿಶೀಲಿಸಿ ಇತ್ತೀಚಿನ ಸರ್ಕಾರದ ಆದೇಶ/ ನಿರ್ದೇಶನಗಳನ್ನು ಅಳವಡಿಸಿಕೊಂಡು ಸೂಕ್ತ ಕ್ರಮಕೈಗೊಳ್ಳಲು ಅನುಮೋದನೆ ನೀಡಿತು.

೨೦೦. ೧೨ ದೂರಶಿಕ್ಷಣ ನಿರ್ದೇಶನಾಲಯದ ೨೦೧೯–೨೦ನೇ ಸಾಲಿನ ಸ್ನಾತಕೋತ್ತರ ಪದವಿ, ಸ್ನಾತಕೋತ್ತರ ಡಿಪ್ಲೊಮ ಮತ್ತು ಡಿಪ್ಲೊಮ ಕಾರ್ಯಕ್ರಮಗಳ ಶೈಕ್ಷಣಿಕ ವೇಳಾಪಟ್ಟಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಈ ವಿಷಯವನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೦. ೧೩ ಮೇ ೧೬, ೨೦೧೯ರಂದು ನಡೆದ ಪ್ರಸಾರಾಂಗ ಸಲಹಾ ಸಮಿತಿ ಸಭೆಯ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಪ್ರಸಾರಾಂಗದ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಭೆಯು ಪರಿಶೀಲಿಸಿ, ಸದರಿ ನಡವಳಿಗಳನ್ನು ಪುನರ್ ಪರಿಷ್ಕರಿಸಲು ಸೂಚಿಸಿ, ಅನುಮೋದನೆ ನೀಡಿತು.

೧. ಪ್ರಕಟಣೆಗೆ ಸಂಬಂಧಿಸಿದ ಪೂರ್ಣ ಪ್ರಮಾಣದ ಪರಿಶೀಲನಾ ವರದಿಗಳು ಸಲ್ಲಿಕೆಯಾಗಿದ್ದಲ್ಲಿ ಪ್ರಕಟಣೆಗೆ ಕ್ರಮಕೈಗೊಳ್ಳುವುದು.
೨. ಪ್ರಕಟಣೆಗೆ ಸಂಬಂಧಿಸಿದ ಪರಿಶೀಲನಾ ವರದಿಗಳು ಬಾರದಿದ್ದಲ್ಲಿ ಅಂತಹ ಪ್ರಕಟಣೆಯನ್ನು ತಡೆಹಿಡಿದು, ವರದಿ ಸಲ್ಲಿಕೆಯಾದ ನಂತರ ಕ್ರಮವಹಿಸುವುದು.
೩. ಪ್ರಕಟಣಾ ಕೃತಿಯ ವಿಷಯದ ಜೊತೆಗೆ ಪರಿಶೀಲನಾ ವರದಿ ಸಲ್ಲಿಸುವುದು ಕಡ್ಡಾಯ ಎಂದು ಸಂಬಂಧಿಸಿದವರಿಗೆ ಸೂಚಿಸುವುದು.
೪. ಇಂತಹ ಪರಿಶೀಲನಾ ಗೌರವ ಸಂಭಾವನೆ ವೆಚ್ಚಗಳನ್ನು ಪ್ರಸಾರಾಂಗವು ಕರಡು ಪ್ರತಿಯನ್ನು ಪರಿಶೀಲಿಸಿ ಪಾವತಿಗೆ ಕ್ರಮವಹಿಸುವುದು.

೨೦೦. ೧೪ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಬಿಡುಗಡೆ ಮಾಡಿರುವ ಕನ್ನಡ ವಿಶ್ವವಿದ್ಯಾಲಯದ ೨೦೧೬–೧೭ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ ೪೫ರಂತೆ ಶ್ರೀ ಬಿ.ಈರಪ್ಪ ಹಾಗೂ ಶ್ರೀ ಪಂಪಾಪತಿ ಇವರು ೨೦೧೦–೧೧ನೇ ಸಾಲಿನಲ್ಲಿ ಜಮೆ (ಹೊಂದಾಣಿಕೆಯಾಗದ ಮೊತ್ತ)ದ ವಿವರದ ಕುರಿತು ರೂ. ೩,೫೫.೮೭೫/– ಗಳನ್ನು ವಸೂಲಾತಿಗೆ ಲೆಕ್ಕ ಪರಿಶೋಧನಾ ಇಲಾಖೆಯವರು ಸೂಚಿಸಿದ ಹಿನ್ನೆಲೆಯಲ್ಲಿ ಈ ಮೊತ್ತವನ್ನು ಸದರಿಯವರ ವೇತನದಿಂದ ಸಮಾನ ೬೦ ಕಂತುಗಳಲ್ಲಿ ಕಡಿತಗೊಳಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಈ ಕುರಿತಂತೆ ಅಡಾಕ್ ಕಮಿಟಿ ರಚಿಸಿ, ವರದಿಯನ್ನು ಪಡೆದು ಸದರಿ ಸಮಿತಿ ನಿರ್ಣಯದನ್ವಯ ಕ್ರಮವಹಿಸುವುದು. ಈ ಸಂಬಂಧ ವರದಿಯನ್ನು ಲೆಕ್ಕ ಪರಿಶೋಧನಾ ಇಲಾಖೆಗೆ ಸಲ್ಲಿಸಲು ಸಭೆ ನಿರ್ಣಯಿಸಿತು.

ಹಣಕಾಸು ವಿಭಾಗದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ನಗದು, ಚೆಕ್ ಮತ್ತು ಡಿ.ಡಿ. ಮೂಲಕ ಪಾವತಿಸುವ ಕ್ರಮವನ್ನು ಸ್ಥಗಿತಗೊಳಿಸಿ, ಇನ್ನು ಮುಂದೆ ಹಣಕಾಸು ವಿಭಾಗವು ಎಲ್ಲ ತರಹದ ಪಾವತಿಗಳನ್ನು ಆರ್.ಟಿ.ಜಿ.ಎಸ್. ಮೂಲಕ ಪಾವತಿಸಲು ಕ್ರಮವಹಿಸುವಂತೆ ಸಭೆ ನಿರ್ಣಯಿಸಿತು.

೨೦೦. ೧೫ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಬಿಡುಗಡೆ ಮಾಡಿರುವ ಕನ್ನಡ ವಿಶ್ವವಿದ್ಯಾಲಯದ ೨೦೧೬–೧೭ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ ೪೭ರಂತೆ ತಾಂತ್ರಿಕ ವಿಭಾಗದ ಸಹಾಯಕ ಅಭಿಯಂತರರು ಹಾಗೂ ಕಿರಿಯ ಅಭಿಯಂತರರುಗಳಿಗೆ ವಾಹನ ನಿರ್ವಹಣೆ ಪ್ರಯಾಣ ಭತ್ಯೆ ಹೆಚ್ಚುವರಿ ಪಾವತಿಸಿದ ಮೊತ್ತ ಎಂದು ರೂ. ೮೪,೦೦೦/–ಗಳನ್ನು ವಸೂಲಾತಿಗೆ ಲೆಕ್ಕ ಪರಿಶೋಧನಾ ಇಲಾಖೆಯವರು ಸೂಚಿಸಿದ್ದಾರೆ. ಈ ಮೊತ್ತವನ್ನು ಶ್ರೀ ಜೆ.ಎಸ್. ನಂಜಯ್ಯನವರ್, ಶ್ರೀ ಚಂದ್ರಶೇಖರಪ್ಪ, ಶ್ರೀ ಕೆ.ಶ್ರೀನಿವಾಸಲು ಹಾಗೂ ಶ್ರೀ ಗುರುಮೂರ್ತಿ ಇವರಿಂದ ತಲಾ ೨೧,೦೦೦/ – ಗಳನ್ನು ಇವರುಗಳ ವೇತನದಿಂದ ಸಮಾನ ೧೦ ಕಂತುಗಳಲ್ಲಿ ಕಡಿತಗೊಳಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ಸಿಬ್ಬಂದಿಗಳ ವೇತನದಲ್ಲಿ, ಸಮಾನ ಮೂರು(೩) ಕಂತುಗಳಲ್ಲಿ ಕಡಿತಗೊಳಿಸಲು ಸಭೆ ಅನುಮೋದನೆ ನೀಡಿತು.

೨೦೦. ೧೬ ಸಿ.ಎ.ಎಸ್ ಮುಂಬಡ್ತಿಗಾಗಿ ದಿನಾಂಕ ೧೯.೦೩.೨೦೧೯ರಂದು ಸಂದರ್ಶನ ನಡೆದಿರುತ್ತದೆ. ಚುನಾವಣಾ ನೀತಿ ಸಂಹಿತೆ ತೆರವಾಗಿರುವ ಕಾರಣ ಅದಕ್ಕೂ ಹಿಂದಿನ ಪ್ರಕ್ರಿಯೆಯಂತೆ ಸದರಿ ಸಹಾಯಕ ಪ್ರಾಧ್ಯಾಪಕರಿಗೆ ಸಹಪ್ರಾಧ್ಯಾಪಕ ಹುದ್ದೆಗೆ ಸಿಎಎಸ್ ಮುಂಬಡ್ತಿ ನೀಡುವ ಬಗ್ಗೆ ನಿರ್ದೇಶನ ಕೋರಿದೆ.

ನಿರ್ಣಯ : ನಿಯಮಾನುಸಾರ ಕ್ರಮವಹಿಸಲು ಸಭೆ ಅನುಮೋದನೆ ನೀಡಿತು.

೨೦೦. ೧೭ ವಿಶ್ವವಿದ್ಯಾಲಯದ 'ಡಿ' ದರ್ಜೆ ನೌಕರರ ಹುದ್ದೆಗಳನ್ನು ಮೇಲ್ದರ್ಜೆಗೇರಿಸಿ (ಮುಂಬಡ್ತಿ) ನೀಡುವ ಆದೇಶಗಳನ್ನು ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಸ್ಥಗಿತಗೊಳಿಸಲಾಗಿತ್ತು. ಪ್ರಸ್ತುತ ನೀತಿ ಸಂಹಿತೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ಮೇಲ್ದರ್ಜೆಗೇರಿಸಿ (ಮುಂಬಡ್ತಿ) ಆದೇಶಗಳನ್ನು ನೀಡುವ ಬಗ್ಗೆ ಕಾರ್ಯಕಾರಿ ಸಮಿತಿ ನಿರ್ದೇಶನ ಕೋರಿದೆ.

ನಿರ್ಣಯ : ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ (ಕೆ.ಸಿ.ಎಸ್.ಆರ್.)ಅಡಿಯಲ್ಲಿ ೨೦೧೩ರಿಂದ ಸರ್ಕಾರವು ಕಿರಿಯ ಸಹಾಯಕರ ಹುದ್ದೆಗೆ ಪಿ.ಯು.ಸಿ. ವಿದ್ಯಾರ್ಹತೆಯನ್ನು ನಿಗದಿಪಡಿಸಿದೆ. ೨೦೧೩ರಕ್ಕಿಂತ ಮುಂಚೆ, ತಿದ್ದುಪಡಿ ಪೂರ್ವದಲ್ಲಿಯೇ 'ಡಿ'ಗುಂಪಿನ ಹುದ್ದೆಗೆ ನೇಮಕಗೊಂಡು, ನಂತರ ಎಸ್.ಎಸ್.ಎಲ್.ಸಿ./ ಬ್ರಿಡ್ಜ್‌ಕೋರ್ಸ್ (ಇಕ್ವಲೆಂಟ್–೧೦) ತೇರ್ಗಡೆ ಹೊಂದಿರುವ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡುವ ಕುರಿತಂತೆ ಸಂಬಂಧಿಸಿದ ಇಲಾಖೆಯಿಂದ ಸ್ಪಷ್ಟನೆ ಕೋರಲು ಸಭೆ ನಿರ್ಣಯಿಸಿತು.

೨೦೦. ೧೮ ಸಮುದಾಯ ರೇಡಿಯೋ ಕೇಂದ್ರ ಸ್ಥಾಪನೆ ಪ್ರಸ್ತಾವಕ್ಕೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ನಿಯಮಾನುಸಾರ ಕ್ರಮವಹಿಸಲು ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

೨೦೦. ೧೯ ಕನ್ನಡ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಕೈಗೊಳ್ಳಲು ಉದ್ದೇಶಿಸಿರುವ ಈ ಕೆಳಗಿನ ವಿಶೇಷ ಯೋಜನೆಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

೧. ಅಂತರ್ಜಾಲದ ಮೂಲಕ ಕನ್ನಡದ ಕಲಿಕೆ, ೨. ಹಳಗನ್ನಡ ಸಾಹಿತ್ಯದ ಮಾಹಿತಿ ಕೋಶ, ೩. ದಕ್ಷಿಣ ಭಾರತೀಯ ಜಾನಪದ ಕೋಶದ ಇಂಗ್ಲಿಷ್ ಅನುವಾದ, ೪. ನಿಘಂಟುಗಳನ್ನು ಮತ್ತು ಕವಿಚರಿತೆಯನ್ನು ಅಂತರ್ಜಾಲದಲ್ಲಿ ಅಳವಡಿಸುವ ಯೋಜನೆ, ೫. ಅಂತಾರಾಷ್ಟ್ರಿಯ ಕನ್ನಡ ಕೇಂದ್ರ, ೬. ಕನ್ನಡ ಸಂಶೋಧನೆಯ ಮಾಹಿತಿ, ೭. ಪುರಂದರ ದಾಸರ ಕೃತಿಗಳ ವಿಮರ್ಶಾತ್ಮಕ ಆವೃತ್ತಿ, ೮. ವಿದೇಶೀ ವಿದ್ಯಾರ್ಥಿಗಳಿಗೆ ಶಿಕ್ಷಣ ಕುರಿತು.

ನಿರ್ಣಯ : ಈ ಕುರಿತು ಪರಿಶೀಲಿಸಿದ ಸಭೆಯು ನಿಯಮಾನುಸಾರ ಕ್ರಮವಹಿಸಲು ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

೨೦೦. ೨೦ ಕನ್ನಡ ವಿಶ್ವವಿದ್ಯಾಲಯವು ಹೊಸದಾಗಿ ಆರಂಭಿಸಿರುವ ಈ ಕೆಳಗಿನ **ಎಂ.ಎ.ಪಿಎಚ್.ಡಿ ಸಂಯೋಜಿತ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮ ಹಾಗೂ ಸ್ನಾತಕೋತ್ತರ ಡಿಪ್ಲೊಮ**ಗಳಿಗೆ ಸಂಬಂಧಿಸಿದ ಅನುಶಾಸನಗಳನ್ನು ಸಿದ್ಧಪಡಿಸಲಾಗಿದ್ದು, ಸದರಿ ಅನುಶಾಸನಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ ಹಾಗೂ ಈ ಅನುಶಾಸನಗಳನ್ನು ಸರ್ಕಾರದ ಅನುಮತಿಗಾಗಿ ಸಲ್ಲಿಸಲು ಸಮಿತಿ ಅನುಮೋದನೆ ಕೋರಿದೆ.

**ಎಂ.ಎ.ಪಿಎಚ್.ಡಿ ಸಂಯೋಜಿತ ಪದವಿಗಳಾದ**
೧. ಇತಿಹಾಸ ಮತ್ತು ಪುರಾತತ್ವ
೨. ಸಮಾಜಶಾಸ್ತ್ರ
೩. ಗ್ರಾಮೀಣಾಭಿವೃದ್ಧಿ

**ಸ್ನಾತಕೋತ್ತರ ಪದವಿಯಾದ**
೧. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ

**ಡಿಪ್ಲೊಮ**
೧. ನಾಟಕ ಕಲೆ

**ಸ್ನಾತಕೋತ್ತರ ಡಿಪ್ಲೊಮಗಳಾದ**
೧. ಕನ್ನಡ ಭಾಷಾಧ್ಯಯನ
೨. ದ್ರಾವಿಡ ಭಾಷಾ ವಿಜ್ಞಾನ
೩. ಹಸ್ತಪ್ರತಿಶಾಸ್ತ್ರ
೪. ಭಾಷಾಂತರ
೫. ಜಾನಪದ
೬. ಮಾನವಶಾಸ್ತ್ರ
೭. ಬುಡಕಟ್ಟು ಅಧ್ಯಯನ
೮. ಶಾಸನಶಾಸ್ತ್ರ
೯. ಪತ್ರಿಕೋದ್ಯಮ
೧೦. ಪುರಾತತ್ವ, ವಸ್ತುಸಂಗ್ರಹಾಲಯಶಾಸ್ತ್ರ ಮತ್ತು ಪ್ರವಾಸೋದ್ಯಮ
೧೧. ಪಂಚಾಯತ್‌ರಾಜ್

ನಿರ್ಣಯ : ಅನುಶಾಸನಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು ಹಾಗೂ ಸದರಿ ಅನುಶಾಸನಗಳನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಲು ಸಭೆ ತೀರ್ಮಾನಿಸಿತು.

೧೦೦. ೨೧ ಕನ್ನಡ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಆರಂಭಿಸಲು ಉದ್ದೇಶಿಸಿರುವ ಯೋಗ ಅಧ್ಯಯನ ಸರ್ಟಿಫಿಕೇಟ್ ಕೋರ್ಸ್ ಡಿಪ್ಲೊಮ/ ಸ್ನಾತಕೋತ್ತರ ಡಿಪ್ಲೊಮ ಕೋರ್ಸ್‌ಗಳಿಗೆ ಮತ್ತು ಸಿದ್ಧಪಡಿಸಲಾದ ಅನುಶಾಸನಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ. ಹಾಗೂ ಈ ಅನುಶಾಸನಗಳನ್ನು ಸರ್ಕಾರದ ಅನುಮತಿಗಾಗಿ ಸಲ್ಲಿಸಲು ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಅನುಶಾಸನಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು ಹಾಗೂ ಸದರಿ ಅನುಶಾಸನಗಳನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಲು ಸಭೆ ತೀರ್ಮಾನಿಸಿತು.

೧೦೦. ೨೨ ೨೦೧೯-೨೦ನೇ ಶೈಕ್ಷಣಿಕ ಸಾಲಿನ ವಿವಿಧ ಕೋರ್ಸ್‌ಗಳ ವಾರ್ಷಿಕ ವೇಳಾಪಟ್ಟಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ೨೦೧೯-೨೦ನೇ ಶೈಕ್ಷಣಿಕ ಸಾಲಿನ ವಿವಿಧ ಕೋರ್ಸ್‌ಗಳ ವಾರ್ಷಿಕ ವೇಳಾಪಟ್ಟಿಗೆ ಸಭೆ ಅನುಮೋದನೆ ನೀಡಿತು.

೧೦೦. ೨೩ ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿ/ಬಾಹ್ಯ ಮಾರ್ಗದರ್ಶಕರ ಅರ್ಜಿಗಳನ್ನು ಆಯಾ ಅಧ್ಯಯನ ವಿಭಾಗಗಳ ಮುಖ್ಯಸ್ಥರು ಹಾಗೂ ಡೀನ್ ಸಮಿತಿಯು ಪರಿಶೀಲಿಸಿ ಅಂತಿಮಗೊಳಿಸಿದ ಪಟ್ಟಿಗೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿ/ಬಾಹ್ಯ ಮಾರ್ಗದರ್ಶಕರ ಅರ್ಜಿಗಳ ಪಟ್ಟಿಯಲ್ಲಿ ಮಾಹಿತಿಗಳು ಅಪೂರ್ಣವಾಗಿರುವ ಹಿನ್ನೆಲೆಯಲ್ಲಿ ಪುನರ್ ಪರಿಶೀಲಿಸಿ ಸಲ್ಲಿಸಲು ಸಂಬಂಧಿಸಿದ ವಿಭಾಗಗಳಿಗೆ ಸೂಚಿಸಲು ಸಭೆ ತೀರ್ಮಾನಿಸಿತು.

೧೦೦. ೨೪ ಸಮಾಜ ವಿಜ್ಞಾನಗಳ ನಿಕಾಯ, ಭಾಷಾ ನಿಕಾಯ ಹಾಗೂ ಲಲಿತಕಲೆಗಳ ನಿಕಾಯಗಳಿಗೆ ಡೀನರುಗಳನ್ನು ನಿಯೋಜಿಸಲಾಗಿದೆ. ಸದರಿ ಕ್ರಮಕ್ಕೆ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ : ಸಮಾಜ ವಿಜ್ಞಾನಗಳ ನಿಕಾಯ, ಭಾಷಾ ನಿಕಾಯ ಹಾಗೂ ಲಲಿತಕಲೆಗಳ ನಿಕಾಯಗಳಿಗೆ ಡೀನರುಗಳನ್ನು ನಿಯೋಜಿಸಿರುವುದಕ್ಕೆ ಸಭೆ ಘಟನೋತ್ತರ ಅನುಮೋದನೆ ನೀಡಿತು.

೧೦೦. ೨೫ ಕನ್ನಡ ವಿಶ್ವವಿದ್ಯಾಲಯದಲ್ಲಿ ನೇಮಕಾತಿ ಘಟಕ (ಪ್ಲೇಸ್‌ಮೆಂಟ್ ಸೆಲ್) ಹಾಗೂ ಕಾನೂನು ಸಲಹಾ ಘಟಕಗಳನ್ನು ಪ್ರಾರಂಭಿಸುವ ಕುರಿತು.

ನಿರ್ಣಯ : ಈ ಕುರಿತು ಸಭೆಯು ಪರಿಶೀಲಿಸಿ ಸದರಿ ಘಟಕಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಿತು.

೧೦೦. ೨೬ ರಾಜಶೇಖರ ಹತಗುಂದಿ, ತಾತ್ಕಾಲಿಕ ಸಿಬ್ಬಂದಿ ಬೆಂಗಳೂರು ಇವರು ನೀಡಿರುವ ರಾಜೀನಾಮೆ ಕುರಿತು.

ನಿರ್ಣಯ : ಸದರಿಯವರು ನೀಡಿರುವ ರಾಜೀನಾಮೆಯನ್ನು ಸಭೆ ಅಂಗೀಕರಿಸಿತು.

೧೦೦. ೨೭ ಶ್ರೀ ಅಭೇರಾಜ್ ಬಲ್ಡೋಟ ಜೈನ ಅಧ್ಯಯನ ಪೀಠದಿಂದ ಕರ್ನಾಟಕ ಸಾಂಸ್ಕೃತಿಕ ಕೇಂದ್ರಗಳು ವಿಶ್ವಕೋಶವನ್ನು ಪ್ರಕಟಿಸುವ ಕುರಿತು.

ನಿರ್ಣಯ : ಶ್ರೀ ಅಭೇರಾಜ್ ಬಲ್ಡೋಟ ಜೈನ ಅಧ್ಯಯನ ಪೀಠದಿಂದ ಸದರಿ ವಿಶ್ವಕೋಶವನ್ನು ಪ್ರಕಟಿಸಲು ಸಭೆ ಅನುಮೋದನೆ ನೀಡಿತು.

೧೦೦. ೨೮ ವಿಶ್ವವಿದ್ಯಾಲಯದಲ್ಲಿ ಜಾನಪದ ಮತ್ತು ಬುಡಕಟ್ಟು ಪತ್ರಾಗಾರ (ಆರ್ಕೀವ್ಸ್) ಸ್ಥಾಪಿಸುವ ಬಗ್ಗೆ.

ನಿರ್ಣಯ : ಈ ಕುರಿತಂತೆ ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಂಡಿತು.

೧. ಈ ಸಂಬಂಧ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವುದು.
೨. ಈಗಾಗಲೇ ನಿರ್ಮಾಣಗೊಂಡಿರುವ/ಸಿದ್ಧವಿರುವ ಕಟ್ಟಡದಲ್ಲಿ ಜಾನಪದ, ಬುಡಕಟ್ಟು ಸಮುದಾಯಗಳಿಗೆ ಸಂಬಂಧಿಸಿದ ಸಮಗ್ರ ಮಾಹಿತಿಗಳನ್ನು ಒಳಗೊಂಡ ಪತ್ರಾಗಾರ ಮತ್ತು ಆರ್ಟ್‌ಗ್ಯಾಲರಿ ನಿರ್ಮಿಸುವುದು.
೩. ಸದರಿ ಯೋಜನೆಗೆ ಕೇಂದ್ರ ಸರ್ಕಾರದ (ಎಂ.ಎಚ್.ಆರ್.ಡಿ.)ಅನುದಾನ ಪಡೆಯಲು ಕ್ರಮವಹಿಸುವುದು.
೪. ಖಾಸಗಿ ಸಂಸ್ಥೆಗಳು ವಿಶ್ವವಿದ್ಯಾಲಯದ ಆವರಣಕ್ಕೆ ಆಗಮಿಸಿ ಈ ಗ್ಯಾಲರಿಯಲ್ಲಿ ಮೇಲಿನ ವಿಷಯಕ್ಕೆ ಸಂಬಂಧಿಸಿದ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸುವುದು.

೧೦೦. ೨೯ ಒನಕೆ ಓಬವ್ವ ಅಧ್ಯಯನ ಪೀಠದ ಕ್ರಿಯಾಯೋಜನೆ ಕುರಿತು.

ನಿರ್ಣಯ : ಈ ಕುರಿತು ಸಭೆಯು ಪರಿಶೀಲಿಸಿ ಒನಕೆ ಓಬವ್ವ ಅಧ್ಯಯನ ಪೀಠವನ್ನು ಒನಕೆ ಓಬವ್ವ ಅಧ್ಯಯನ ಕೇಂದ್ರ ಎಂದು ಬದಲಾಯಿಸಿ ಸರ್ಕಾರದ ಅನುಮೋದನೆ ಪಡೆಯಲು ಸಭೆ ತೀರ್ಮಾನಿಸಿತು.
ಹಾಗೂ ಸದರಿ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ಸಭೆ ಅನುಮೋದನೆ ನೀಡಿತು.

೨೦೦. ೩೦ ಜೈನ ಸಾಹಿತ್ಯ ಸಂಸ್ಕೃತಿ ಅಧ್ಯಯನ ಕೇಂದ್ರ ಶ್ರವಣಬೆಳಗೊಳದಲ್ಲಿನ ಯೋಜನೆ ಸಂಬಂಧ ಒಬ್ಬ ಸಂಶೋಧನಾ ಸಹಾಯಕರನ್ನು ನಿಯೋಜಿಸುವ ಬಗ್ಗೆ

ನಿರ್ಣಯ : ಸದರಿ ಯೋಜನೆಗೆ ನಿಯಾಮಾನುಸಾರ ಒಬ್ಬ ಸಂಶೋಧನಾ ಸಹಾಯಕರನ್ನು ನಿಯೋಜಿಸಿಕೊಳ್ಳಲು ಸಭೆ ಅನುಮೋದನೆ ನೀಡಿತು.

**೨೦೦. ೩೧ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಹೊಸದಾಗಿ ವಸತಿಗೃಹ ನಿರ್ಮಾಣ ಮಾಡಲು ಪ್ರಾರಂಭಿಸಲಾಗಿತ್ತು. ಸದರಿ ಅತಿಥಿಗೃಹವನ್ನು ಸ್ಥಗಿತಗೊಳಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾದ ನಾಗರಿಕ ನಿವೇಶನದಲ್ಲಿ ಅತಿಥಿಗೃಹ ಕಾಮಗಾರಿಯನ್ನು ಪ್ರಾರಂಭಿಸುವ ಬಗ್ಗೆ**

**ಟಿಪ್ಪಣಿ :** ಕನ್ನಡ ವಿಶ್ವವಿದ್ಯಾಲಯಕ್ಕೆ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನಂತಶಯನಗುಡಿಯಲ್ಲಿ ಸರ್ವೇ ಸಂಖ್ಯೆ. ೧೪೫/೦೩ (ಐ) ವಿಸ್ತೀರ್ಣ ೧೦೭೬೦ ಚದುರ ಅಡಿ ನಾಗರಿಕ ನಿವೇಶನದಲ್ಲಿ ನಿವೇಶನ ಮಂಜೂರಾಗಿದೆ. ಸದರಿ ನಿವೇಶನದಲ್ಲಿ ಅತಿಥಿಗೃಹವನ್ನು ನಿರ್ಮಿಸುವುದು ಮೂಲ ಉದ್ದೇಶವಾಗಿತ್ತು. ಇದರ ನಕ್ಷೆಗೆ ಆರ್ಕಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ ಇಲಾಖೆಯಿಂದ ನಕ್ಷೆಗೆ ಹಾಗೂ ಅತಿಥಿಗೃಹ ನಿರ್ಮಾಣಕ್ಕೆ ಅನುಮತಿ ದೊರೆಯದ ಕಾರಣದಿಂದ ಅತಿಥಿಗೃಹವನ್ನು ರೂ.೨.೦೦ ಕೋಟಿ (ರೂ. ಎರಡು ಕೋಟಿ ಮಾತ್ರ) ವೆಚ್ಚದಲ್ಲಿ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರಾರಂಭಿಸಲಾಗಿತ್ತು. ಈಗ ಸದರಿ ಇಲಾಖೆಯಿಂದ ಅತಿಥಿಗೃಹ ನಿರ್ಮಿಸಲು ಅನುಮತಿ ದೊರೆತಿದೆ. ಕುಲಪತಿಗಳು ಅನಂತಶಯನಗುಡಿಯಲ್ಲಿ ಅತಿಥಿಗೃಹ ನಿರ್ಮಿಸುವ ಪ್ರಸ್ತಾವನೆಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಥಿತಿಗೃಹವನ್ನು ಹೊಸಪೇಟೆಯ ಅನಂತಶಯನಗುಡಿಯಲ್ಲಿನ ನಿವೇಶನದಲ್ಲಿ ನಿರ್ಮಿಸಲು ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

**೨೦೦. ೩೨ ಮಾನ್ಯ ಕುಲಪತಿಗಳ ಗೃಹ ಕಚೇರಿ ಮಾನಸೋಲ್ಲಾಸ ಕಟ್ಟಡ ನವೀಕರಣ ಕುರಿತು**

**ಟಿಪ್ಪಣಿ :** ಮಾನ್ಯ ಕುಲಪತಿಗಳ ಗೃಹ ಕಚೇರಿ ಮಾನಸೋಲ್ಲಾಸ ಕಟ್ಟಡವನ್ನು ೨೦೦೧-೦೨ರಲ್ಲಿ ನಿರ್ಮಿಸಲಾಗಿದೆ. ಕಟ್ಟಡದಲ್ಲಿನ ಕಮೋಡ್‌ಗಳು, ವಾಸ್‌ಬೇಸಿನ್ ಮತ್ತು ಬಾತ್‌ಟಬ್ ಹಾಳಾಗಿದ್ದು, ಇವುಗಳನ್ನು ತೆಗೆದು ಹೊಸದಾಗಿ ಅಳವಡಿಸುವುದು. ಕೆಲವು ಡೋರ್ ಶಟರ್ ಹಾಗೂ ಫ್ರೇಮ್‌ಗಳಿಗೆ ಗೆದ್ದಲು ಹಿಡಿದಿದ್ದು ಅವುಗಳನ್ನು ತೆಗೆದು ಹೊಸದಾಗಿ ಅಳವಡಿಸುವುದು. ಎಲ್ಲಾ ಕಿಟಕಿಗಳಿಗೆ ಮೆಸ್ ಫ್ರೇಮ್ ಅಳವಡಿಸುವುದು. ನೆಲಮಹಡಿಯ ಮೂರು ಬಾಗಿಲುಗಳಿಗೆ ಭದ್ರತಾ ದೃಷ್ಟಿಯಿಂದ ಹೊರಭಾಗದಿಂದ ಕಬ್ಬಿಣದ ಸೇಪ್ಟಿ ಡೋರ್ ಅಳವಡಿಸುವುದು, ಕಟ್ಟಡಕ್ಕೆ ಬಣ್ಣ ಬಳಿಯುವುದು, ಹೊಸದಾಗಿ ಸೋಲಾರ್ ವಾಟರ್ ಹೀಟರ್ ಅಳವಡಿಸುವುದು ಅದಕ್ಕೆ ಜಿ.ಐ. ಮೆಶ್ ಅಳವಡಿಸುವುದು, ಒಂದು ಸಾವಿರ ಸಾಮರ್ಥ್ಯದ ವಾಟರ್ ಟ್ಯಾಂಕ್ ಮತ್ತು ಕಬ್ಬಿಣದ ಸ್ಟ್ಯಾಂಡ್ ಅಳವಡಿಸುವುದು, ಬಾತ್‌ರೂಮ್ ಟ್ಯಾಪ್ಸ್ ಮತ್ತು ಶವರ್ ಟ್ಯಾಪ್ಸ್ ಹಾಳಾಗಿದ್ದನ್ನು ತೆಗೆದು ಹೊಸದಾಗಿ ಅಳವಡಿಸುವುದು, ಹಾಳಾದ ವಿದ್ಯುತ್ ಸ್ವಿಚ್ ತೆಗೆದು ಹೊಸದಾಗಿ ಅಳವಡಿಸುವುದು, ಹಾಳಾದ ಬಾತ್‌ರೂಮ್ ಟೈಲ್ಸ್ ತೆಗೆದು ಹೊಸದಾಗಿ ಅಳವಡಿಸುವುದು, ಹಾಳಾದ ಪ್ಲಂಬಿಂಗ್ ಸಾಮಗ್ರಿಗಳನ್ನು ತೆಗೆದು ಹೊಸದಾಗಿ ಅಳವಡಿಸುವುದು ಪ್ರತ್ಯೇಕ ಕಾಮಗಾರಿಗಳ ಒಟ್ಟು ಅಂದಾಜು ವೆಚ್ಚ ರೂ.೧೫,೮೦,೫೦೦=೦೦ (ರೂ. ಹದಿನೈದು ಲಕ್ಷದ ಎಂಬತ್ತು ಸಾವಿರದ ಐದುನೂರು ಮಾತ್ರ)ಗಳಾಗಿದ್ದು, ಕ್ರೆಡಿಲ್ ಸಂಸ್ಥೆ ಮುಖಾಂತರ ಕಾಮಗಾರಿ ನಿರ್ವಹಿಸಿದ್ದು ಬಿಲ್ ಪಾವತಿ ಮೊತ್ತಕ್ಕೆ ಕಾರ್ಯಕಾರಿ ಸಮಿತಿಯ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ : ಕುಲಪತಿಗಳ ಗೃಹ ಕಚೇರಿ ನವೀಕರಣಕ್ಕೆ ಹಾಗೂ ಪ್ರತ್ಯೇಕ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.೧೫,೮೦,೫೦೦/-ಗಳಿಗೆ ಸಭೆ ಅನುಮೋದನೆ ನೀಡಿತು.

**೨೦೦. ೩೩ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಹೆಚ್ಚುವರಿಯಾಗಿ ೧೦೦ ಕೆ.ವಿ.ಎ. ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಕುರಿತು**

**ಟಿಪ್ಪಣಿ :** ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಬೋಧಕರ ವಸತಿ ಗೃಹದ ಹತ್ತಿರ ೨೫೦ ಕೆ.ವಿ.ಎ. ವಿದ್ಯುತ್ ಪರಿವರ್ತಕವನ್ನು ಅಳವಡಿಸಿ ಸುಮಾರು ೨೩ ವರ್ಷಗಳಾಗಿವೆ. ಸದರಿ ವಿದ್ಯುತ್ ಪರಿವರ್ತಕದಿಂದ ವಿವಿಧ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದೆ. ಆದರೆ ಮಾನ್ಯ ಕುಲಪತಿಗಳ ನಿವಾಸ, ಕಾವ್ಯ-ಕಾದಂಬರಿ, ಘಟಿಕಾಲಯ, ಗಿರಿಸೀಮೆ ಮತ್ತು ಶ್ರೀಶೈಲ ಅತಿಥಿಗೃಹದ ಕಟ್ಟಡಗಳಿಗೆ LOW VOLTAGE ವಿದ್ಯುತ್ ಸಂಪರ್ಕ ಬರುತ್ತಿದೆ. ಇದರಿಂದ ಅಳವಡಿಸಲಾದ ಹವಾನಿಯಂತ್ರಣ ಯಂತ್ರಗಳು, ಫ್ರಿಡ್ಜ್ ಮತ್ತು ದೀಪಗಳು ಕಾರ್ಯನಿರ್ವಹಿಸುತ್ತಿಲ್ಲ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳ ಸಮ್ಮುಖದಲ್ಲಿ GESCOM ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದ್ದು, ಸ್ಥಳವನ್ನು ಪರಿಶೀಲಿಸಿ ಅಂದಾಜು ವೆಚ್ಚವನ್ನು ಸಲ್ಲಿಸಲು ಮೌಖಿಕವಾಗಿ ಸೂಚನೆ ನೀಡಿರುತ್ತಾರೆ. ಅದರಂತೆ GESCOM ಅಧಿಕಾರಿಗಳು ಸ್ಥಳವನ್ನು ಪರಿಶೀಲಿಸಿ ಅಂದಾಜು ವೆಚ್ಚವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಅಂದಾಜು ವೆಚ್ಚದ ಮೊತ್ತ

ರೂ.೪,೩೭,೦೪೦=೦೦ (ರೂ.ನಾಲ್ಕು ಲಕ್ಷದ ಮೂವತ್ತೇಳು ಸಾವಿರದ ನಲುವತ್ತು ಮಾತ್ರ)ಗಳಾಗಿದ್ದು, ಸದರಿ ಮೊತ್ತಕ್ಕೆ ಹಾಗೂ ಕೆಲಸವನ್ನು ನಿರ್ವಹಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ವಿಶ್ವವಿದ್ಯಾಲಯದ ಆವರಣದಲ್ಲಿ ಹೊಸದಾಗಿ ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್‌ಮರ್) ಅಳವಡಿಸಲು ಹಾಗೂ ಅಂದಾಜು ಮೊತ್ತ ರೂ. ೪,೩೭,೦೪೦/-ಗಳಿಗೆ ಸಭೆ ಅನುಮೋದನೆ ನೀಡಿತು.

೨೦೦. ೩೪ **ಮಾನ್ಯ ಕುಲಪತಿಗಳ ನಿವಾಸಕ್ಕೆ ೩೫ ಕೆ.ವಿ.ಎ. ಡೀಸಲ್ ಜನರೇಟರ್ ಅಳವಡಿಸುವ ಕುರಿತು**

**ಟಿಪ್ಪಣಿ** : ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಮಾನ್ಯ ಕುಲಪತಿಗಳ ನಿವಾಸ ನಿರ್ಮಿಸಿ ಸುಮಾರು ೧೭ ವರ್ಷಗಳು ಆಗಿವೆ. ಸದರಿ ಕಟ್ಟಡಕ್ಕೆ ಜನರೇಟರ್ ಅಳವಡಿಸಿರುವುದಿಲ್ಲ. ಕಟ್ಟಡದ ವಿದ್ಯುತ್ ಲೋಡ್ ೨೮ K.W. ಇರುತ್ತದೆ. ವಿದ್ಯುತ್ ವ್ಯತ್ಯಯವಾದಾಗ ವಿದ್ಯುತ್ ಒದಗಿಸಲು ಕಟ್ಟಡಕ್ಕೆ ೩೫ ಕೆ.ವಿ.ಎ. ಜನರೇಟರ್ ಅವಶ್ಯವಿರುತ್ತದೆ. ಸದರಿ ಜನರೇಟರ್‌ನಿಂದ ವಿದ್ಯುತ್ ಸಂಪರ್ಕವನ್ನು ಕಲ್ಪಿಸಬೇಕಾಗುತ್ತದೆ. ಈ ಕಾರಣದಿಂದ ತುರ್ತಾಗಿ ಜನರೇಟರ್ ಅವಶ್ಯವಿರುತ್ತದೆ. ಹಾಗೂ ಇದಕ್ಕೆ ತಗಲುವ ಅಂದಾಜು ವೆಚ್ಚ ರೂ.೫,೦೦,೦೦೦=೦೦ (ರೂ.ಐದು ಲಕ್ಷ ಮಾತ್ರ)ಗಳಾಗಬಹುದು. ಸದರಿ ಮೊತ್ತಕ್ಕೆ ಹಾಗೂ ಕೆಲಸವನ್ನು ನಿರ್ವಹಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಮಾನ್ಯ ಕುಲಪತಿಗಳ ನಿವಾಸಕ್ಕೆ ಜನರೇಟರ್ ಅಳವಡಿಸಲು ಹಾಗೂ ಅಂದಾಜು ಮೊತ್ತ. ೫,೦೦,೦೦೦/-ಗಳಿಗೆ ಸಭೆ ಅನುಮೋದನೆ ನೀಡಿತು.

೨೦೦. ೩೫ ಸಮಗ್ರ ದಾಸ ಸಾಹಿತ್ಯ ಅಧ್ಯಯನ ಪೀಠ ಸಂಬಂಧ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವ ಕುರಿತು.

ನಿರ್ಣಯ : ಸಮಗ್ರ ದಾಸ ಸಾಹಿತ್ಯ ಅಧ್ಯಯನ ಪೀಠಕ್ಕೆ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿ ಮುಂದಿನ ಕ್ರಮವಹಿಸಲು ಸಭೆ ಅನುಮೋದನೆ ನೀಡಿತು.

೨೦೦. ೩೬ ಬೆಳಗಾವಿಯ ತಾಂತ್ರಿಕ ವಿಶ್ವವಿದ್ಯಾಲಯದೊಂದಿಗೆ ಕನ್ನಡ ವಿಶ್ವವಿದ್ಯಾಲಯದ ಪರೀಕ್ಷೆ, ಮೌಲ್ಯಮಾಪನ ಹಾಗೂ ಅಂಕಪಟ್ಟಿ ಸಿದ್ಧತೆ ಕುರಿತಂತೆ ಸಾಪ್ಟ್‌ವೇರ್ ನಿರ್ಮಿಸುವ ಬಗ್ಗೆ.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಪರೀಕ್ಷೆ, ಮೌಲ್ಯಮಾಪನ ಹಾಗೂ ಅಂಕಪಟ್ಟಿ ಸಿದ್ಧತೆ ಕುರಿತಂತೆ ಸಾಪ್ಟ್‌ವೇರ್ ನಿರ್ಮಿಸಲು ನಿಯಮಾನುಸಾರ ಕ್ರಮಕೈಗೊಳ್ಳಲು ಸಭೆ ಅನುಮೋದನೆ ನೀಡಿತು.

೨೦೦. ೩೭ ಉನ್ನತ ಶಿಕ್ಷಣ ಪರಿಷತ್ತು/ ಇಲಾಖೆಯ ಸೂಚನೆಯಂತೆ ವಿಶ್ವವಿದ್ಯಾಲಯವು ಗ್ರಾಮಗಳನ್ನು ದತ್ತು ತೆಗೆದುಕೊಂಡು ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ,

ನಿರ್ಣಯ : ಯೋಗಕೇಂದ್ರ, ವಿದ್ಯಾರ್ಥಿ ಕ್ಷೇಮಪಾಲನಾ ಘಟಕ, ಮಹಿಳಾ ಅಧ್ಯಯನ ವಿಭಾಗ/ಕೇಂದ್ರ ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ಸಹಭಾಗಿತ್ವದಲ್ಲಿ ಸಾಮಾಜಿಕ ಜಾಗೃತಿ ಮತ್ತು ಪರಿಸರ ಪ್ರಜ್ಞೆಯನ್ನು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲು ಸಭೆ ತೀರ್ಮಾನಿಸಿತು.

೨೦೦. ೩೮ ಕನ್ನಡ ವಿಶ್ವವಿದ್ಯಾಲಯದಲ್ಲಿ ವಿವಿಧ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವ ಕುರಿತು.

ನಿರ್ಣಯ : ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು ಗಾಂಧಿ ಅಧ್ಯಯನ ಕೇಂದ್ರ, ಅಂಬೇಡ್ಕರ್ ಅಧ್ಯಯನ ಕೇಂದ್ರ, ಬಾಬು ಜಗಜೀವನರಾಮ್ ಅಧ್ಯಯನ ಕೇಂದ್ರ, ದೇವರಾಜ ಅರಸು ಅಧ್ಯಯನ ಕೇಂದ್ರ ಹಾಗೂ ಯೋಗ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲು ಸಭೆ ಅನುಮೋದನೆ ನೀಡಿತು.

೨೦೦. ೩೯ ಬಿ.ಕೆ. ಪವಿತ್ರ ಪ್ರಕರಣದಲ್ಲಿ ಹಿಂಬಡ್ತಿ ಪಡೆದಿದ್ದ ಆಡಳಿತ ಸಿಬ್ಬಂದಿಗಳಿಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪು ಹಾಗೂ ಸರ್ಕಾರದ ಆದೇಶದ ಪ್ರಕಾರ ಮುಂಬಡ್ತಿ ನೀಡುವ ಕುರಿತು.

ನಿರ್ಣಯ : ಸರ್ವೋಚ್ಚ ನ್ಯಾಯಾಲಯದ ತೀರ್ಪು ಹಾಗೂ ಸರ್ಕಾರದ ಆದೇಶದನ್ವಯ ಸಂಬಂಧಪಟ್ಟವರಿಗೆ ಅವರು ಈ ಹಿಂದೆ ಧಾರಣೆ ಮಾಡಿದ್ದ ಹುದ್ದೆಗಳಿಗೆ ಮುಂಬಡ್ತಿ ನೀಡಲು ಸಭೆ ಅನುಮೋದನೆ ನೀಡಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

7/6/19
ಕುಲಪತಿಗಳು
ಅಧ್ಯಕ್ಷರು